


بسم اللهِ الرّحمٰنِ الرّحيم

# ಪ್ರವಾದಿ ಚರಿತ್ರೆ – ಬನೂ ನಧೀರ್ ಘಟನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–06–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಯಹೂದಿ ಗೋತ್ರವಾದ ಬನೂ ನಝೀರ್‌ನ ಕುತಂತ್ರದ ಕುರಿತು ಪ್ರಸ್ತಾಪಿಸಲಾಗಿತ್ತು. ಅಲ್ಲಾಹನು ಅವರ ಯೋಜನೆಯನ್ನು ಹೇಗೆ ವಿಫಲಗೊಳಿಸಿದನು ಎಂಬುದನ್ನು ನಾನು ವಿವರಿಸುತ್ತೇನೆ. ಈ ಕುರಿತು ಹೀಗೆ ಬರೆಯಲಾಗಿದೆ: ದಿವ್ಯವಾಣಿಯ ಮೂಲಕ ಹಝ್ರತ್ ಪೈಗಂಬರ್(ಸ)ರಿಗೆ ಕುತಂತ್ರದ ಬಗ್ಗೆ ಗೊತ್ತಾಯಿತು. ಹಝ್ರತ್ ಪೈಗಂಬರ್(ಸ)ರ ಮೇಲೆ ಕಲ್ಲನ್ನು ಬೀಳಿಸಲು ಅಮ್ರ್ ಬಿನ್ ಜಹ್‌ಶ್ ಛಾವಣಿಯ ಮೇಲೇರಿದನು. ಅಷ್ಟರಲ್ಲಿ ಯಹೂದಿಯರ ಯೋಜನೆಯ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯವಾಣಿಯ ಮೂಲಕ ಅರಿವಾಯಿತು. ಅವರು ಕುಳಿತಿದ್ದ ಜಾಗದಿಂದ ಎದ್ದುಕೊಂಡು ಯಾವುದೋ ಕೆಲಸವಿದೆ ಎಂಬ ರೀತಿಯಲ್ಲಿ ಬೇಗನೇ ಹೊರಟು ಹೋದರು. ಅವರು ಬೇಗನೇ ಮದೀನಕ್ಕೆ ಮರಳಿದರು. ಹಝ್ರತ್ ಪೈಗಂಬರ್(ಸ) ಯಾವುದೋ ಅಗತ್ಯಕ್ಕಾಗಿ ಹೋಗಿರುವರು ಎಂದೇ ಸಹಾಬಿಯರು ಕೂಡ ಭಾವಿಸಿಕೊಂಡರು. ಆದರೆ ತಡವಾದಾಗ ಸಹಾಬಿಯರು ಚಿಂತಿತರಾದರು ಮತ್ತು ಅವರನ್ನು ಹುಡುಕಲು ಹೊರಟರು. ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಪ್ರವೇಶಿಸುವುದನ್ನು ಕಂಡದ್ದಾಗಿ ಮದೀನದಿಂದ ಬರುತ್ತಿದ್ದ ಒಬ್ಬ ವ್ಯಕ್ತಿ ಸಹಾಬಿಯರೊಡನೆ ಹೇಳಿದರು. ಸಹಾಬಿಯರು ಕೂಡಲೇ ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪಿದರು. ಬನೂ ನಝೀರ್ ಗೋತ್ರ ಮಾಡಿದ್ದ ಯೋಜನೆಯ ಬಗ್ಗೆ ಆಗ ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ತಿಳಿಸಿದರು.

ಮತ್ತೊಂದೆಡೆ ಯಹೂದಿಯರು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಮತ್ತು ಸಹಾಬಿಯರನ್ನು ಬಂಧಿಸುವುದರ ಕುರಿತು ಸಮಾಲೋಚನೆ ನಡೆಸುತ್ತಿದ್ದರು. ಮದೀನದಿಂದ ಬಂದ ಒಬ್ಬ ಯಹೂದಿ ಇದನ್ನು ಆಲಿಸಿದಾಗ ಆತನು ಹೇಳಿದನು: ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಪ್ರವೇಶಿಸುವುದನ್ನು ನಾನು ಕಂಡಿದ್ದೆ. ಇದನ್ನು ಕೇಳಿ ಯಹೂದಿಯರು ಆಶ್ಚರ್ಯಗೊಂಡರು. ಮತ್ತೊಬ್ಬ ಚರಿತ್ರೆಗಾರ ಇದರ ಕುರಿತು ಹೀಗೆ ಬರೆದಿರುವರು: ದಿವ್ಯವಾಣಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಬೇಗನೇ ಹೊರಟುಹೋದರು. ಸಹಾಬಿಯರು ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಇಲ್ಲದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಅವರೊಡನೆ ಇದರ ಕುರಿತು ಹೇಳಿರಲಿಲ್ಲ. ಯಹೂದಿಯರ ನಿಜವಾದ ಗುರಿ ಹಝ್ರತ್ ಪೈಗಂಬರ್(ಸ)ರನ್ನು ವಧಿಸುವುದಾಗಿತ್ತು. ನನ್ನ ಸಹಾಬಿಯರು ಸುರಕ್ಷಿತರಾಗಿರುವರು ಮತ್ತು ಬೇಗನೇ ನನ್ನನ್ನು ಹುಡುಕಲು ಹೊರಟು ಬರುವರು ಎಂಬ ಕಾರಣದಿಂದ ಹಝ್ರತ್ ಪೈಗಂಬರ್(ಸ) ಸಮಾಧಾನದಲ್ಲಿದ್ದರು. ಆ ವೇಳೆ ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣಗೊಂಡಿತು ಎಂದು ಹೇಳಲಾಗುತ್ತದೆ:

يٰٓاَيُّهَا الَّذِيْنَ اٰمَنُوا اذْكُرُوْا نِعْمَتَ اللّٰهِ عَلَيْكُمْ اِذْ هَمَّ قَوْمٌ اَنْ يَّبْسُطُوْٓا اِلَيْكُمْ اَيْدِيَهُمْ فَكَفَّ اَيْدِيَهُمْ عَنْكُمْ ۚ وَاتَّقُوا اللّٰهَ ۗ وَعَلَى اللّٰهِ فَلْيَتَوَكَّلِ الْمُؤْمِنُوْنَ

ಅರ್ಥ: ವಿಶ್ವಾಸಿಗಳೇ, ಒಂದು ಕೋಮಿನವರು ನಿಮ್ಮ ಮೇಲೆ ಕೈಯೆತ್ತಲು ಉದ್ದೇಶಿಸಿದಾಗ ನಿಮ್ಮ ಮೇಲೆ ಉಂಟಾದ ಅಲ್ಲಾಹನ ಅನುಗ್ರಹವನ್ನು ಸ್ಮರಿಸಿರಿ. ಅವನು ಅವರ ಕೈಗಳನ್ನು ನಿಮ್ಮಿಂದ ತಡೆದನು. ನೀವು ಅಲ್ಲಾಹನ ಭಯಭಕ್ತಿಯುಳ್ಳವರಾಗಿರಿ. ಸತ್ಯವಿಶ್ವಾಸಿಗಳು ತಮ್ಮ ಎಲ್ಲ ಕಾರ್ಯಗಳಲ್ಲೂ ಅಲ್ಲಾಹನಲ್ಲಿ ಭರವಸೆ ಇಡಬೇಕಾಗಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಕುರಿತು ಹೀಗೆ ಬರೆದಿರುವರು: ಹಝ್ರತ್ ಪೈಗಂಬರ್(ಸ) ಬಂದದ್ದಕ್ಕಾಗಿ ಯಹೂದಿಯರು ತೋರಿಕೆಗೆ ಸಂತೋಷವನ್ನು ಪ್ರಕಟಿಸಿದರು. ಆದರೆ ಹಝ್ರತ್ ಪೈಗಂಬರ್(ಸ)ರನ್ನು ಮುಗಿಸಲು ಇದು ಬಹಳ ಉತ್ತಮ ಸಂದರ್ಭವೆಂದು ಅವರು ಗೂಢಾಲೋಚನೆ ನಡೆಸಿದರು. ಯಹೂದಿಯರಲ್ಲಿ ಒಬ್ಬ ವ್ಯಕ್ತಿಯಾದ ಸಲಾಂ ಬಿನ್ ಮಶ್‌ಕಮ್ ಈ ಯೋಜನೆಯನ್ನು ವಿರೋಧಿಸಿದರು ಮತ್ತು ಇದು ಮೋಸಗಾರಿಕೆಯಾಗಿದೆ ಎಂದೂ ಇದು ನಾವು ಹಝ್ರತ್ ಪೈಗಂಬರ್(ಸ)ರೊಡನೆ ಮಾಡಿರುವ ಒಪ್ಪಂದದ ಉಲ್ಲಂಘನೆಯಾಗಿದೆ ಎಂದೂ ಅವರು ಹೇಳಿದರು. ಆದರೆ ಆ ಜನರು ಒಪ್ಪಲಿಲ್ಲ.

ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೋದ ನಂತರ ಯಹೂದಿಯರು ತಮ್ಮ ಯೋಜನೆಯ ಬಗ್ಗೆ ಲಜ್ಜಿತಗೊಂಡರು. ಒಬ್ಬ ಯಹೂದಿಯಾದ ಕನಾನ ಬಿನ್ ಸವೇರ ಹೇಳಿದನು: ತೌರಾತಿನ ಆಣೆ, ನೀವು ಹಝ್ರತ್ ಪೈಗಂಬರ್(ಸ)ರಿಗೆ ಮೋಸ ಮಾಡಲು ಉದ್ದೇಶಿಸಿದ್ದನ್ನು ನಿಸ್ಸಂಶಯವಾಗಿಯೂ ಅವರಿಗೆ ದಿವ್ಯವಾಣಿ ಮೂಲಕ ತಿಳಿಸಲಾಗಿದೆ ಎಂದು ನನಗೆ ಗೊತ್ತಿದೆ. ಅಲ್ಲಾಹನಾಣೆ, ಅವರು ಅಲ್ಲಾಹನ ಸಂದೇಶವಾಹಕರಾಗಿರುವರು. ನೀವು ಮೋಸಮಾಡಲು ಬಯಸಿದ್ದೀರಿ ಎಂದು ಅವರಿಗೆ ದಿವ್ಯವಾಣಿ ಮೂಲಕ ತಿಳಿಸಲಾಗಿದೆ. ಅವರು ನಿಸ್ಸಂಶಯವಾಗಿಯೂ ಕೊನೆಯ ಪ್ರವಾದಿಯಾಗಿರುವರು. ಕೊನೆಯ ಪ್ರವಾದಿ ಹಾರೂನಿನ ವಂಶಾವಳಿಯಿಂದ ಬರಬೇಕು

ಎಂದು ನೀವು ಬಯಸಿದ್ದೀರಿ. ಆದರೆ ಅಲ್ಲಾಹನು ಬಯಸಿದಂತೆ ಅಲ್ಲಾಹನು ಅವರನ್ನು ನಿಯೋಗಿಸಿದನು. ನಿಸ್ಸಂಶಯವಾಗಿಯೂ ತೌರಾತಿನಲ್ಲಿ ನಾವು ಪಠಿಸುವ ಗ್ರಂಥಗಳಲ್ಲಿ ಆ ಪ್ರವಾದಿಯ ಜನನ ಮಕ್ಕದಲ್ಲಿ ಆಗುವುದು ಮತ್ತು ಯಸ್‌ರಿಬ್‌ಗೆ ವಲಸೆ ಹೋಗುವರು ಎಂದು ಬರೆಯಲಾಗಿದೆ. ನಮ್ಮ ಗ್ರಂಥವಾದ ತೌರಾತಿನಲ್ಲಿ ವರ್ಣಿಸಲಾದ ಗುಣಗಳು ಕೇವಲ ಅವರಲ್ಲಿ ಮಾತ್ರ ಈಡೇರುತ್ತಿವೆ. ನಿಮಗೆ ರಕ್ತಪಾತವಲ್ಲದೇ ಬೇರೇನೂ ಲಭಿಸದು ಎಂದು ನನಗೆ ಗೊತ್ತಿದೆ. ನೀವು ನಿಮ್ಮ ಸಂಪತ್ತು, ಸೊತ್ತುಗಳು ಹಾಗೂ ಮಕ್ಕಳನ್ನು ಅಳುವ ಮತ್ತು ರೋದಿಸುವ ಸ್ಥಿತಿಯಲ್ಲಿ ಬಿಟ್ಟು ಬಿಡುವಿರಿ. ನೀವು ನನ್ನ ಎರಡು ಮಾತುಗಳನ್ನು ಒಪ್ಪಿದರೆ ಅದರಲ್ಲಿ ನಿಮಗೆ ಒಳಿತಿದೆ. ಮೊದಲನೆಯದಾಗಿ ನೀವು ಇಸ್ಲಾಂ ಸ್ವೀಕಾರ ಮಾಡಿಕೊಂಡು ಮುಹಮ್ಮದ್[ಸ]ರ ಸಂಗಡಿಗರಾದರೆ ನಿಮ್ಮ ಸಂಪತ್ತು ಮತ್ತು ನಿಮ್ಮ ಮಕ್ಕಳು ಸುರಕ್ಷಿತರಾಗುವರು. ನೀವು ಅವರ ಉನ್ನತ ಪದವಿಯ ಸಂಗಡಿಗರಲ್ಲಿ ಸೇರುವಿರಿ. ಎರಡನೆಯ ಸಂಗತಿ ಏನೆಂದರೆ, ನೀವು ಕಾಯಿರಿ, ನೀವು ನನ್ನ ಪಟ್ಟಣದಿಂದ ಹೊರಟು ಹೋಗಿರಿ ಎಂದು ಅವರು ಸಮೀಪ ಕಾಲದಲ್ಲೇ ನಿಮಗೆ ಆದೇಶ ನೀಡುವರು. ಆಗ ನೀವು ಸರಿ ಎಂದು ಹೇಳಿರಿ. ಆಗ ಅವರು ನಿಮ್ಮ ರಕ್ತ ಮತ್ತು ಸಂಪತ್ತನ್ನು ಅವರಿಗಾಗಿ ಅನುಮತನೀಯವನ್ನಾಗಿ ಗಣಿಸಲಾರರು ಮತ್ತು ನಿಮ್ಮ ಸಂಪತ್ತು ಮತ್ತು ಸೊತ್ತುಗಳನ್ನು ನಿಮಗಾಗಿ ಬಿಡುವರು. ಇದನ್ನು ಕೇಳಿ 'ನಾವು ಅದಕ್ಕಾಗಿ ತಯಾರಾಗಿದ್ದೇವೆ' ಎಂದು ಅವರು ಹೇಳಿದರು. ಮದೀನ ತಲುಪಿದಾಗ ಹಝ್ರತ್ ಪೈಗಂಬರ್[ಸ] ಯಹೂದಿಯರೊಡನೆ ಪಟ್ಟಣವನ್ನು ತ್ಯಜಿಸಲು ಆದೇಶ ನೀಡಿದರು. ಆದರೆ ಅವರು ಅದನ್ನು ನಿರಾಕರಿಸಿದರು ಮತ್ತು ಯುದ್ಧ ಮಾಡಲು ನಿರ್ಧರಿಸಿದರು.

ಇದರ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ಬರೆಯುತ್ತಾರೆ: ಹಝ್ರತ್ ಪೈಗಂಬರ್[ಸ] ಔಸ್ ಗೋತ್ರದ ಒಬ್ಬ ಸರದಾರನಾದ ಮುಹಮ್ಮದ್ ಬಿನ್ ಮಸ್‌ಲಮರನ್ನು ಕರೆದು ಹೀಗೆ ಹೇಳಿದರು: ನೀವು ಬನೂ ನಝೀರ್ ಗೋತ್ರದ ಬಳಿಗೆ ಹೋಗಿರಿ. ಅವರೊಡನೆ ಈ ವಿಷಯದ ಕುರಿತು ಮಾತುಕತೆ ನಡೆಸಿರಿ. ಅವರು ತಮ್ಮ ದ್ರೋಹ ಮತ್ತು ಮೋಸಗಾರಿಕೆಯಲ್ಲಿ ಮಿತಿ ಮೀರಿದ್ದಾರೆ. ಆದ್ದರಿಂದ ಅವರು ಮದೀನದಲ್ಲಿ ಇರುವುದು ಸರಿಯಲ್ಲ ಎಂದು ಅವರೊಡನೆ ಹೇಳಿರಿ. ಅವರು ಮದೀನವನ್ನು ಬಿಟ್ಟು ಬೇರೆ ಎಲ್ಲಾದರೂ ನೆಲೆಸುವುದು ಉತ್ತಮ. ಹಝ್ರತ್ ಪೈಗಂಬರ್[ಸ] ಅದಕ್ಕಾಗಿ ಅವರಿಗೆ ಹತ್ತು ದಿನಗಳ ಕಾಲಾವಧಿಯನ್ನು ನಿಗದಿಪಡಿಸಿದರು. ಮುಹಮ್ಮದ್ ಬಿನ್ ಮಸ್‌ಲಮ[ರ] ಅವರ ಬಳಿಗೆ ಹೋದಾಗ ಅವರು ಮಸ್ಲಮರ ಮುಂದೆ ಬಹಳ ಅಹಂಕಾರದಿಂದ ವರ್ತಿಸಿದರು ಮತ್ತು ಹೀಗೆ ಹೇಳಿದರು: ನಾವು ಮದೀನ ಬಿಟ್ಟು ಹೋಗಲು ತಯಾರಲ್ಲವೆಂದು ಮುಹಮ್ಮದ್‌ರೊಡನೆ[ಸ] ಹೇಳಿರಿ. ನೀವು ಮಾಡಬೇಕಾದದ್ದನ್ನು ಮಾಡಿರಿ. ಅವರ ಈ ಉತ್ತರ ಹಝ್ರತ್ ಪೈಗಂಬರ್[ಸ]ರಿಗೆ ತಲುಪಿದಾಗ ಹಝ್ರತ್ ಪೈಗಂಬರ್[ಸ] ಅನಿಯಂತ್ರಿತವಾಗಿ ಹೀಗೆ ಹೇಳಿದರು: ಅಲ್ಲಾಹು ಅಕ್ಬರ್, ಯಹೂದಿಯರು ಯುದ್ಧಕ್ಕಾಗಿ ತಯಾರಾಗಿ ಕುಳಿತಿರುವರು.

ಅನಂತರ ಹಝ್ರತ್ ಪೈಗಂಬರ್[ಸ] ಮುಸ್ಲಿಮರೊಡನೆ ತಯಾರಾಗಲು ಆದೇಶ ನೀಡಿದರು ಮತ್ತು ಸಹಾಬಿಯರ ಒಂದು ಸಂಘದೊಂದಿಗೆ ಬನೂ ನಝೀರಿನ ವಿರುದ್ಧ ಮೈದಾನಕ್ಕೆ ಹೊರಟರು. ಆದರೆ ಬನೂ ನಝೀರ್ ಗೋತ್ರ ಮುಸ್ಲಿಮರ ವಿರುದ್ಧ ತೆರೆದ ಮೈದಾನಕ್ಕೆ ಬರಲಿಲ್ಲ. ಅವರು ಕೋಟೆಯನ್ನು ಮುಚ್ಚಿ ಒಳಗೆ ಕುಳಿತುಕೊಂಡರು. ಆ ವೇಳೆ ಸಲಾಂ ಬಿನ್ ಮಿಶ್‌ಕಮ್ ಹೀಗೆ ಹೇಳಿದರು: ಮುಹಮ್ಮದ್ ಅಲ್ಲಾಹನ ಸತ್ಯವಂತ ಸಂದೇಶವಾಹಕರೆಂದು ನಮಗೆ ಸಹ ಗೊತ್ತಿದೆ. ಅವರ ಗುಣಗಳ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ನಾವು ಅವರನ್ನು ಅನುಸರಿಸದೇ ಇರಲು ಕಾರಣ ನಾವು ಅವರ ಬಗ್ಗೆ ಅಸೂಯೆ ಹೊಂದಿದ್ದೇವೆ ಎಂಬುದಾಗಿದೆ. ಏಕೆಂದರೆ ಪ್ರವಾದಿತ್ವ ಬನೂ ಹಾರೂನ್‌ರಿಂದ ಬಿಟ್ಟು ಹೋಗಿದೆ. ಬನ್ನಿರಿ ನಾವು ಅವರು ದಯಪಾಲಿಸಿದ ಸಂರಕ್ಷಣೆಯನ್ನು ಸ್ವೀಕರಿಸೋಣ ಮತ್ತು ಅವರ ಪಟ್ಟಣದಿಂದ ಹೊರಡೋಣ. ಇಲ್ಲದಿದ್ದರೆ ನಾವು ನಮ್ಮ ಭೂಮಿಯಿಂದ ಹೊರ ಹಾಕಲ್ಪಡುವೆವು ಹಾಗೂ ನಮ್ಮ ಸಂಪತ್ತು ಮತ್ತು ಗೌರವ ಕೊನೆಗೊಳ್ಳುವುದು. ನಮ್ಮ ಮಕ್ಕಳು ಬಂಧಿಗಳಾಗುವರು. ನಮ್ಮ ಯೋಧರು ಕೊಲ್ಲಲ್ಪಡುವರು ಎಂದು ಹೇಳಿದರು. ಆದರೆ ಸಲಾಂ ಬಿನ್ ಮಿಶ್‌ಕಮ್‌ನ ಈ ಮಾತುಗಳ ಬಗ್ಗೆ ಯಾರೂ ಗಮನ ಕೊಡಲಿಲ್ಲ.

ರಾಜ್ಯದ ಸರದಾರನನ್ನು ವಧಿಸಲು ಯೋಜನೆ ಹಾಕಿದ್ದ ರಾಜ್ಯದ ಆ ದುಷ್ಟ ಬಂಡಾಯಗಾರರನ್ನು ದಮನಿಸಬೇಕಾದುದು ಅಗತ್ಯವಾಗಿತ್ತು. ಏಕೆಂದರೆ ಆ ಸಮಯದಲ್ಲಿ ಹಝ್ರತ್ ಪೈಗಂಬರ್[ಸ] ರಾಜ್ಯದ ಸರದಾರರಾಗಿದ್ದರು. ಆ ದುಷ್ಟರು ಪಶ್ಚಾತ್ತಾಪಪಡುವುದಕ್ಕೆ ಬದಲಾಗಿ ಆಯುಧ ಧರಿಸಿ ಯುದ್ಧದ ಘೋಷಣೆ ಮಾಡಿದ್ದರು. ಮದೀನವನ್ನು ಒಂದು ದೊಡ್ಡ ರಕ್ತಪಾತದಿಂದ ರಕ್ಷಿಸಲು ಹಾಗೂ ಮದೀನವನ್ನು ಸಂರಕ್ಷಿಸಲು ಬಂಡಾಯಗಾರರನ್ನು ತಡೆಯುವುದು ಅಗತ್ಯವಾಗಿ ಬಿಟ್ಟಿತ್ತು. ಆದ್ದರಿಂದ ಯಾವುದೇ ನಿರ್ವಾಹವಿಲ್ಲದೇ ಹಝ್ರತ್ ಪೈಗಂಬರ್[ಸ]ರಿಗೆ ಅವರ ವಿರುದ್ಧ ಯುದ್ಧ ಮೈದಾನಕ್ಕೆ ಹೊರಡಬೇಕಾಗಿ ಬಂತು.

ಹಝ್ರತ್ ಪೈಗಂಬರ್[ಸ] ಮದೀನದಲ್ಲಿ ಇಬ್ನು ಮಕ್‌ತೂಮ್‌ರನ್ನು ತನ್ನ ಪ್ರತಿನಿಧಿಯನ್ನಾಗಿ ನಿಶ್ಚಯಿಸಿದರು ಮತ್ತು ಮದೀನದಿಂದ ಹೊರಟು ಬನೂ ನಝೀರ್ ಗೋತ್ರದ ಗ್ರಾಮಕ್ಕೆ ಮುತ್ತಿಗೆ ಹಾಕಿದರು. ಹಝ್ರತ್ ಅಲಿ[ರ]ರನ್ನು ಹಝ್ರತ್ ಪೈಗಂಬರ್[ಸ] ಸೈನ್ಯದ ಅಮೀರನ್ನಾಗಿ, ಮತ್ತೊಂದು ಹೇಳಿಕೆಯ ಪ್ರಕಾರ ಹಝ್ರತ್ ಅಬೂಬಕರ್[ರ]ರನ್ನು ಅಮೀರ್ ಆಗಿ ನಿಶ್ಚಯಿಸಿದರು. ಅಂತೂ ಮುಸ್ಲಿಮರು ಮುತ್ತಿಗೆ ಮಾಡಿಕೊಂಡು ಮತ್ತು ಪದೇ ಪದೇ ತಕ್ಬೀರ್ ಘೋಷಣೆ ಮಾಡಿಕೊಂಡು ರಾತ್ರಿ ಕಳೆದರು. ಬೆಳಿಗ್ಗೆಯಾದಾಗ ಹಝ್ರತ್ ಬಿಲಾಲ್[ರ] ಫಜ್ರಿನ ಅಧಾನ್ ಕೊಟ್ಟರು. ಆಗ ಹಝ್ರತ್ ಪೈಗಂಬರ್[ಸ] ಅವರೊಂದಿಗೆ ಇದ್ದ ಹತ್ತು ಸಹಾಬಿಯರ ಜೊತೆಗೆ ಸೇನಾ ತಾಣಕ್ಕೆ ಮರಳಿ ಬಂದರು. ಹಝ್ರತ್ ಪೈಗಂಬರ್[ಸ] ಫಜ್ರ್ ನಮಾಝಿಗೆ ಇಮಾಮತ್ ವಹಿಸಿದರು. ಯಹೂದಿಯರಲ್ಲಿ ಒಬ್ಬ ವ್ಯಕ್ತಿಯ ಹೆಸರು ಅಝ್‌ಬಕ್ ಎಂದಾಗಿತ್ತು. ಆತನು ಹಝ್ರತ್ ಪೈಗಂಬರ್[ಸ]ರ ಡೇರೆಯನ್ನು ಗುರಿಯಾಗಿಸಿಕೊಂಡು ಬಾಣ ಎಸೆದನು. ಆ ಬಾಣ ಡೇರೆಗೆ ತಗುಲಿತು. ಹಝ್ರತ್

ಪೈಗಂಬರ್(ಸ) ಡೇರೆಯನ್ನು ಅಲ್ಲಿಂದ ಸರಿಸಿ ಬಿಲ್ಲುಗಾರರಿಂದ ದೂರದಲ್ಲಿ ಡೇರೆ ಹಾಕಲು ಆದೇಶ ನೀಡಿದರು. ಅದೇ ವೇಳೆ ಒಂದು ರಾತ್ರಿ ಇಶಾದ ಸಮಯದಲ್ಲಿ ಹಝ್ರತ್ ಅಲಿ(ರ) ಸೇನೆಯಲ್ಲಿ ಕಂಡು ಬರಲಿಲ್ಲ. ಯಾ ರಸೂಲಲ್ಲಾಹ್, ಅಲಿ(ರ) ಎಲ್ಲೂ ಕಂಡು ಬರುತ್ತಿಲ್ಲವೆಂದು ಜನರು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಬಗ್ಗೆ ಚಿಂತಿಸಬೇಡಿರಿ. ಏಕೆಂದರೆ ಅವರು ನಿಮ್ಮದೇ ಕೆಲಸಕ್ಕಾಗಿ ಹೋಗಿರುವರು. ಸ್ವಲ್ಪ ಸಮಯ ಕಳೆದಾಗ ಹಝ್ರತ್ ಪೈಗಂಬರ್(ಸ)ರ ಡೇರೆಯ ತನಕ ಯಾರ ಬಾಣ ತಲುಪಿತೋ ಆತನ ತಲೆಯನ್ನು ಹಝ್ರತ್ ಅಲಿ(ರ) ಕಡಿದು ತಂದರು. ಆತನ ಹೆಸರು ಅಝ್‌ಬಕ್ ಎಂದಾಗಿತ್ತು.

ಹಝ್ರತ್ ಅಲಿ(ರ) ಅದೇ ವೇಳೆ ಆತನನ್ನು ಕೊಲ್ಲಲ್ಲು ಹೊಂಚು ಹಾಕಿ ಕುಳಿತುಕೊಂಡಿದ್ದರು. ಆತನು ಮುಸ್ಲಿಮರ ದೊಡ್ಡ ಸರದಾರರಲ್ಲಿ ಯಾರನ್ನಾದರೂ ವಧಿಸಲು ಹೋಗಿದ್ದನು. ಆತನ ಜೊತೆಗೆ ಒಂದು ಸಂಘವಿತ್ತು. ಹಝ್ರತ್ ಅಲಿ(ರ) ಆತನ ಮೇಲೆ ದಾಳಿ ನಡೆಸಿದರು ಮತ್ತು ಆತನನ್ನು ವಧಿಸಿದರು. ಆತನ ಜೊತೆಗೆ ಇದ್ದ ಇತರ ಎಲ್ಲ ಜನರು ಪರಾರಿಯಾದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರ ಜೊತೆಗೆ ಹತ್ತು ವ್ಯಕ್ತಿಗಳ ಒಂದು ಸಂಘವನ್ನು ಕಳುಹಿಸಿದ್ದರು. ಅವರಲ್ಲಿ ಹಝ್ರತ್ ಅಬೂದುಜಾನ(ರ) ಮತ್ತು ಹಝ್ರತ್ ಸಹಲ್ ಬಿನ್ ಹುನೈಫ್(ರ) ಸಹ ಇದ್ದರು. ಹಝ್ರತ್ ಅಲಿ(ರ)ರನ್ನು ನೋಡಿ ಪರಾರಿಯಾಗಿದ್ದ ಅಝ್‌ಬಕ್‌ನ ಜೊತೆಗೆಗಾರರನ್ನು ಆ ಸಂಘದವರು ಹೋಗಿ ಹಿಡಿಗೂಡಿದರು. ಸಹಾಬಿಯರ ಸಂಘ ಅವರೆಲ್ಲರನ್ನೂ ವಧಿಸಿದರು. ಕೆಲವು ಉಲೇಮಾಗಳು, ಆ ಸಂಘದಲ್ಲಿ ಹತ್ತು ವ್ಯಕ್ತಿಗಳಿದ್ದರು ಎಂದು ಹೇಳಿರುವರು. ಸಹಾಬಿಯರು ಅವರನ್ನು ವಧಿಸಿ ಅವರ ತಲೆಗಳನ್ನು ತಂದರು. ಅವುಗಳನ್ನು ಅನಂತರ ಬೇರೆ ಬೇರೆ ಬಾವಿಗಳಲ್ಲಿ ಹಾಕಲಾಯಿತು. ಒಂದು ಹೇಳಿಕೆಯ ಪ್ರಕಾರ ಆ ತಲೆಗಳನ್ನು ಬನೂ ಖತ್‌ಮದ ಬಾವಿಗಳಿಗೆ ಬೀಸಾಕಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರು. ಇದರ ವಿವರಣೆ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಖುತ್ಬ ಸಾನಿಯದ ನಂತರ ಮಸೀದಿಯಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸುವುದರ ಕುರಿತು ಹುಝೂರ್ ಹೀಗೆ ಹೇಳಿದರು:) ನೀವು ನಮಾಝಿನ ಸಫ್ಫುಗಳಲ್ಲಿ ನಿಲ್ಲುವಾಗ ಭುಜಕ್ಕೆ ಭುಜ ಸೇರಿಸಿ ನಿಲ್ಲುವುದಿಲ್ಲವೆಂದು ನನ್ನೊಡನೆ ಒಬ್ಬರು ಹೇಳಿದರು. ಈಗ ಕೋವಿಡ್‌ನ ಕಾಲ ದಾಟಿ ಹೋಯಿತು. ಸಫ್ಫಾಗಿ ನಿಲ್ಲುವಾಗ ಭುಜಕ್ಕೆ ಭುಜ ಸೇರಿಸಿ ನಿಲ್ಲಬೇಕು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak'**, Islamabad, Tilford, UK.* On 21-06-2024
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon